# ಪ್ರಾಗ್ ನಗರಕ್ಕೆ ಶಿಲ್ಪಗಳ ಭಾಷ್ಯೆ



ವಿಶ್ವ ಪ್ರಸಿದ್ಧ 'ಹೆಡ್ ಆಫ್ ಫ್ರಾಂಜ್ ಕಾಫ್ಕಾ' ಶಿಲ್ಪ

**ಕಲಾವಿದನೊಬ್ಬ ತನ್ನ ಕಲಾಕೃತಿಗಳ ಮೂಲಕ ಒಂದು ನಗರದ ಚಹರೆಯ ಮೇಲೆ ಪರಿಣಾಮ ಬೀರಬಹುದೆ? ಈ ಪ್ರಶ್ನೆಗೆ ಉತ್ತರವಾಗಿ ಪ್ರಾಗ್ ನಗರದಲ್ಲಿನ ಡೇವಿಡ್ ಸೆರ್ನಿ ಶಿಲ್ಪಗಳನ್ನು ನೋಡಬಹುದು.**

■ ಜಿ. ನಾಗೇಂದ್ರ

ಯೂರೋಪಿಯನ್ ಒಕ್ಕೂಟದ ಅತ್ಯಂತ ಸುಂದರ ನಗರಗಳಲ್ಲೊಂದಾದ ಪ್ರಾಗ್, ಜೆಕ್ ಗಣರಾಜ್ಯದ ರಾಜಧಾನಿ. ಚಾರಿತ್ರಿಕ ವಾಸ್ತುಶಿಲ್ಪಗಳು ಹಾಗೂ ಸಾಂಪ್ರದಾಯಿಕ ಸಿಹಿ ತಿನಿಸುಗಳಿಗೆ ಪ್ರಾಗ್ ಪ್ರಸಿದ್ಧ.

ಪ್ರಾಗ್ ನಗರದ ಬೀದಿಗಳಲ್ಲಿ ಸಂಚರಿಸಿದರೆ, ಸುಂದರ ಐತಿಹಾಸಿಕ ಕಟ್ಟಡಗಳು ಎದುರಾಗುತ್ತವೆ. ಆ ಕಟ್ಟಡಗಳಷ್ಟೇ ಪ್ರಚೋದನಕಾರಿ ಶಿಲ್ಪಗಳು ಕಾಣಸಿಗುತ್ತವೆ. ಕೆಲವು ಶಿಲ್ಪಗಳು ನಗೆಯುಕ್ಕಿಸಿದರೆ, ಕೆಲವು ನಮ್ಮನ್ನು ಯೋಚಿಸುವಂತೆ ಮಾಡುತ್ತವೆ.

ಇತಿಹಾಸ ಮತ್ತು ಕಲೆಯನ್ನು ಪ್ರೀತಿಸುವ ಯಾರೇ ಆಗಲಿ ಪ್ರಾಗ್ ನಗರವನ್ನು ಹಾಗೂ ಅಲ್ಲಿರುವ ಶಿಲ್ಪಗಳನ್ನು ತಪ್ಪದೇ ಇಷ್ಟಪಡುತ್ತಾರೆ. ಹಾಗಾಗಿ, ಪ್ರಾಗ್ ಸಂದರ್ಶನವೆಂದರೆ, ಅಲ್ಲಿರುವ ವಿಶಿಷ್ಟ ಶಿಲ್ಪಗಳೊಂದಿಗಿನ ಮುಖಾಮುಖಿಯೂ ಹೌದು.

ಡೇವಿಡ್ ಸೆರ್ನಿ ಜೆಕ್ ಗಣರಾಜ್ಯದ ಜನಪ್ರಿಯ ಹಾಗೂ ವಿವಾದಾತ್ಮಕ ಶಿಲ್ಪಿ. ಸೋವಿಯತ್ ರಷ್ಯಾ ವಿರುದ್ಧ ಧ್ವನಿಯೆತ್ತಿದ ಸೆರ್ನಿ ಕೆಲಕಾಲ ಬಂಧನಕ್ಕೊಳಗಾಗಿದ್ದರು. ಅವರ ಬಂಡಾಯ ಮನೋವೃತ್ತಿಯ ಅಭಿವ್ಯಕ್ತಿಯಂತೆ ಪ್ರಾಗ್ ನಗರದ ವಿವಿಧ ಭಾಗಗಳಲ್ಲಿರುವ ಶಿಲ್ಪಗಳು ಕಾಣಿಸುತ್ತವೆ. ಅವರ ಪ್ರತಿಯೊಂದು ಕಲಾಕೃತಿಯೂ ಪ್ರವಾಸಿಗರನ್ನು ಆಕರ್ಷಿಸುವುದಲ್ಲದೆ, ಸಮಾಜವನ್ನು ರಾಜಕೀಯ ಹೇಗೆ ರೂಪಿಸುತ್ತದೆಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳುವಂತೆ ಮಾಡುತ್ತದೆ.

ಪ್ರಾಗ್ ನಗರದ 'ಓಲ್ಡ್ ಟೌನ್'ನ ರಸ್ತೆಯಲ್ಲಿ ಸಂಚರಿಸುತ್ತಿರಬೇಕಾದರೆ, ಎತ್ತರದ ಕಟ್ಟಡವೊಂದರ ಅಂಚಿನಲ್ಲಿ, ಒಂದು ಕೈಯಲ್ಲಿ ಲೋಹದ ರಾಡ್ ಹಿಡಿದುಕೊಂಡು ನೇತಾಡುತ್ತಿರುವ ವ್ಯಕ್ತಿಯ ಶಿಲ್ಪ ಗಮನ ಸೆಳೆಯುತ್ತದೆ. ಸುಮಾರು 20 ಮೀಟರ್ ಎತ್ತರದಲ್ಲಿ ನೇತಾಡುತ್ತಿರುವ, 7 ಅಡಿ ಉದ್ದದ ಶಿಲ್ಪ ಕೈ ಬಿಡಬೇಕೋ ಬೇಡವೋ ಎನ್ನುವ ಸಂದಿಗ್ಧಾವಸ್ಥೆಯಲ್ಲಿರುವಂತೆ ಕಾಣುತ್ತದೆ. ಈ ಶಿಲ್ಪವು ಖ್ಯಾತ ಮನೋವಿಶ್ಲೇಷಕ ಸಿಗ್ಮಂಡ್ ಫ್ರಾಯ್ಡ್‌ನದ್ದಾಗಿದೆ. ಮನೋ ವಿಶ್ಲೇಷಕನಾದರೂ ಫ್ರಾಯ್ಡ್ ಸಾವಿನ ಬಗ್ಗೆ ಭಯಪಡುತ್ತಿದ್ದ ಹಾಗೂ ಹಲವು ವಿಷಯಗಳ ಬಗ್ಗೆ ಭೀತಿಯುಳ್ಳವನಾಗಿದ್ದ. 'ಹ್ಯಾಂಗಿಂಗ್ ಮ್ಯಾನ್' ಶಿಲ್ಪವು ಫ್ರಾಯ್ಡ್‌ನ ಆಂತರಿಕ ಹೋರಾಟಗಳ ಮೇಲೆ ಬೆಳಕು ಚೆಲ್ಲುತ್ತದೆ. ನೇತಾಡುತ್ತಿರುವ ವ್ಯಕ್ತಿಯ ಶಿಲ್ಪವನ್ನು ನಿಜವಾದ ವ್ಯಕ್ತಿಯೆಂದು ಭಾವಿಸಿ ಕೆಲವರು ಅಗ್ನಿಶಾಮಕ ಹಾಗೂ ಪೊಲೀಸ್ ಇಲಾಖೆಗೆ ಕರೆಮಾಡಿ ದೂರು ನೀಡಿದ ಪ್ರಸಂಗಗಳೂ ನಡೆದಿವೆ. ಭವಿಷ್ಯದಲ್ಲಿ ಬೌದ್ಧಿಕತೆಯ ಉಳಿವಿನ ಅನಿಶ್ಚಿತತೆಯ ಸಂಕೇತದ ರೂಪದಲ್ಲೂ ಈ ಶಿಲ್ಪವನ್ನು ನೋಡಲಾಗುತ್ತದೆ.

ಲೆಸ್ಸರ್ ಟೌನ್ ಎಂದು ಕರೆಸಿಕೊಳ್ಳುವ ಮಾಲಾಸ್ಟ್ರಾನಾ ಬೆಟ್ಟಗುಡ್ಡಗಳ ಪ್ರದೇಶ. ಮಾಲಾಸ್ಟ್ರಾನದಲ್ಲಿರುವ 'ಫ್ರಾಂಜ್ ಕಾಫ್ಕಾ ಮ್ಯೂಸಿಯಂ'ನ ಹೊರಗಡೆ ಇರುವ ಇಬ್ಬರು ಪುರುಷರ ಶಿಲ್ಪಗಳು ಪ್ರವಾಸಿಗರ ಗಮನ ಸೆಳೆಯುತ್ತವೆ. 210 ಸೆಂ.ಮೀ. ಎತ್ತರವಿರುವ ಕಂಚಿನಿಂದ ತಯಾರಿಸಲಾದ ಈ ಯಾಂತ್ರೀಕೃತ ಶಿಲ್ಪಗಳು, ಪರಸ್ಪರ

